CIN ; U40109KA2004SGC035177
ನೊಂದಾಯಿತಕಛೇರಿ ವಿಳಾಸ ನಂ 29
ಕಾವೇರಿಗ್ರಾಮೀಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಛೇರಿ ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹುಣಸೂರು
Ph.: 08222 – 252056

ನಿಗಮ ಇ-ಮೇಲ್ :WWW.CESCMYSORE.ORG
email:aeehun@cescmysore.org

ಸಂಖ್ಯೆ:ಸಕಾನಿಇಂ(ವಿ)/ಹುಣ/ಸಇಂ(ತಾ)/2017-18/ 747-53 ದಿನಾಂಕ: 10-07-2017

ದಿನಾಂಕ 17-06-2017 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಶ್ರೀ ಎನ್.ನರಸಿಂಹೇಗೌಡರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಎನ್.ನರಸಿಂಹೇಗೌಡ ರವರು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು
2. ಶ್ರೀ ನಾಗೇಶ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು
3. ಶ್ರೀ ಕಲೀಂ ಅಹಮ್ಮದ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
4. ಶ್ರೀ ಶಿವಪ್ರಸಾದ್ .ಆರ್.ಬಿ., ಸಹಾಯಕ ಇಂಜಿನಿಯರ್(ತಾ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
5. ಶ್ರೀ ಪುರುಷೋತ್ತಮ್, ಸಹಾಯಕ ಇಂಜಿನಿಯರ್ (ವಿ), ಪಟ್ಟಣ ಶಾಖೆ, ಹುಣಸೂರು
6. ಶ್ರೀ ಚನ್ನಕೇಶವ, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ರತ್ನಪುರಿ ಶಾಖೆ
7. ಶ್ರೀ ನಾಗರಾಜು, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಗೋವಿಂದನಹಳ್ಳಿ ಶಾಖೆ
8. ಶ್ರೀ. ಮಂಜುನಾಥ್, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಗಾವಡಗೆರೆ ಶಾಖೆ
9. ಶ್ರೀ. ಕೃಷ್ಣಕುಮಾರ್, ಹಿರಿಯ ಸಹಾಯಕ, ಕಂದಾಯ ಶಾಖೆ, ಹುಣಸೂರು ಉಪವಿಭಾಗ, ಹುಣಸೂರು

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಎಂದು ಸಭೆಗೆ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ:-**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಪುರುಷೋತ್ತಮ, ಕ.ರಾ.ವೆ ತಾಲ್ಲೂಕು ಅಧ್ಯಕ್ಷರು 8904107778 | * ನಗರ ಶಾಖೆಗೆ ಹೆಚ್ಚುವರಿ ಜೆ.ಇ ಯನ್ನು ನಿಯೋಜನೆಗೊಳಿಸಲು ಮನವಿ ಮಾಡಿದರು | ಪಟ್ಟಣ ಶಾಖೆಯಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿದ್ದಲ್ಲಿ ಪ್ರತ್ಯೇಕ ಶಾಖೆ ರಚಿಸಲು ಪ್ರಸ್ತಾವನೆ ಸಲ್ಲಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ಉಪವಿಭಾಗ ರವರಿಗೆ ಸೂಚಿಸಿದರು |

| | | | |
|---|---|---|---|
| | | * ಹುಣಸೂರು ನಗರ ಪ್ರದೇಶದಲ್ಲಿ ವಿದ್ಯುತ್ ಮಾರ್ಗಗಳು ಜೋತು ಬಿದ್ದಿರುತ್ತವೆ. ಇದನ್ನು ಸರಿಪಡಿಸಲು ಕೋರಿದರು<br><br>* ಉಪವಿಭಾಗದಲ್ಲಿ ಎಲ್.ಇ.ಡಿ ಬಲ್ಬ್‌ಗಳ ವಿತರಣ ನಿಂತು ಹೋಗಿರುವುದನ್ನು ಮತ್ತೆ ಶುರು ಮಾಡಬೇಕೆಂದು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ಇಲಾಖೆಯ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ಉಪವಿಭಾಗ ರವರಿಗೆ ಹಾಗೂ ಶಾಖಾಧಿಕಾರಿಗಳಿಗೆ ಸೂಚಿಸಿದರು<br><br>ಮಾನ್ಯಅಧೀಕ್ಷಕಇಂಜಿನಿಯರ್(ವಿ) ರವರು ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು |
| 2. | ಮುನಾವರ್ ಪಾಷ<br>ಕ.ರಾ.ವೆ ಅಧ್ಯಕ್ಷರು<br>9900993578 | * ಖಾಜಿ ಮೊಹಲ್ಲಾದಲ್ಲಿ ಸರ್ವಿಸ್ ಮೈನ್ ವೈರ್‌ಗಳು ತುಂಬ ಅಂತರವಿರುವುದಕ್ಕೆ ಕಂಬಗಳನ್ನು ಅಳವಡಿಸಲು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ಇಲಾಖೆಯ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಶಾಖಾಧೀಕಾರಿಗಳಿಗೆ ಸೂಚಿಸಿದರು |
| 3. | ಸುರೇಶ<br>ತಟ್ಟೆಕೆರೆ<br>9341817703 | * ತಟ್ಟೆಕೆರೆ ಗ್ರಾಮದ 25ಕೆ.ವಿ.ಎ ಐ.ಪಿ ಪರಿವರ್ತಕದ ಎಲ್.ಟಿ ಮಾರ್ಗವು ಜೋತು ಬಿದ್ದಿರುತ್ತದೆ. ಇದನ್ನು ಸರಿಪಡಿಸಲು ಕೋರಿದರು<br><br>* ಹೊಸಕೋಟೆ ಪ್ರಕಾಶ ಬೆಟಗೇರಿ ರವರ ಮನೆಗಳ ಹತ್ತಿರ ಎನ್.ಜೆ.ವೈ ವಿದ್ಯುತ್ ಸಂಪರ್ಕ ನೀಡಲು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಶಾಖಾಧೀಕಾರಿಗಳಿಗೆ ಸೂಚಿಸಿದರು<br><br>ಈ ಬಗ್ಗೆ ಸ್ಥಳಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಶಾಖಾಧೀಕಾರಿಗಳಿಗೆ ಸೂಚಿಸಿದರು |
| 4. | ತಗಡನಾಯಕ<br>ಗೋವಿಂದನಹಳ್ಳಿ<br>ಪಂಚಾಯ್ತಿ ಸದಸ್ಯರು<br>9741349413 | * ಹಂಚ್ಯಾ ಗ್ರಾಮದಲ್ಲಿ ಸುಮಾರು 25 ಮನೆಗಳಿಗೆ ವಿದ್ಯುತ್ ಸಮಸ್ಯೆ ಇದ್ದು. ಸದರಿ ಮನೆಗಳಿಗೆ ಎನ್.ಜೆ.ವೈ ಸಂಪರ್ಕ ನೀಡಬೇಕೆಂದು ಮನವಿ ಮಾಡಿದರು<br><br>* ಆಜಾದ್ ನಗರದಲ್ಲಿ 2 ಕಂಬಗಳು ಬೀಳುವ ಸ್ಥಿತಿಯಲ್ಲಿದ್ದು, ಸದರಿ ಕಂಬಗಳನ್ನು ಸರಿಪಡಿಸಲು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ಉಪವಿಭಾಗ ರವರಿಗೆ ಹಾಗೂ ಶಾಖಾಧೀಕಾರಿಗಳಿಗೆ ಸೂಚಿಸಿದರು<br>ಈ ಬಗ್ಗೆ ಸ್ಥಳಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಂಡು ಸರಿಪಡಿಸಲು ಶಾಖಾಧೀಕಾರಿಗಳಿಗೆ ಸೂಚಿಸಿದರು |
| 5. | ಹೊಸೂರು ಕುಮಾರ್<br>ರೈತ ಸಂಘದ ಜಿಲ್ಲಾ ಅಧ್ಯಕ್ಷರು<br>9902650457 | * ಅಕ್ರಮ ನೀರಾವರಿ ಪಂಪ್‌ಸೆಟ್ ಇರುವ ಪರಿವರ್ತಕಗಳು ವಿಫಲಗೊಂಡಲ್ಲಿ ಬದಲಾಯಿಸುವಲ್ಲಿ ವಿಳಂಬವಾಗುತ್ತಿರುವುದನ್ನು ಸರಿಪಡಿಸುವಂತೆ ಮನವಿ ಮಾಡಿಕೊಂಡರು | ಅಕ್ರಮವಾಗಿ ಚಾಲನೆಯಲ್ಲಿರುವ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ಮಾನ್ಯ ಅಧೀಕ್ಷಕಇಂಜಿನಿಯರ್(ವಿ) ರವರು ಸೂಚಿಸಿದರು ಹಾಗೂ ಇದರಿಂದ ನಿಗಮಕ್ಕೆ ಉಂಟಾಗುತ್ತಿರುವ ನಷ್ಟದ ಬಗ್ಗೆ ಮನವರಿಕೆ ಮಾಡಿ, ರೈತರು |

| | | | | |
|---|---|---|---|---|
| | | | | ಪಂಪ್‌ಸೆಟ್‌ಗಳನ್ನು ಸಕ್ರಮೀಕರಣಗೊಳಿಸಿಕೊಂಡಲ್ಲಿ ರೈತರಿಗೆ ಹೆಚ್ಚುವರಿಯಾಗಿ ಪರಿವರ್ತಕಗಳನ್ನು ಅಳವಡಿಸಲು ಕ್ರಮವನ್ನು ಕೈಗೊಳ್ಳಲಾಗುವುದೆಂದು ಸೂಚಿಸಿದರು |
| | | | * ಹಳ್ಳಿಗಳಿಗೆ ಲೈನ್‌ಮೆನ್‌ಗಳ ಕೊರತೆ ಇದ್ದು, ಹೆಚ್ಚುವರಿ ಲೈನ್‌ಮೆನ್‌ಗಳನ್ನು ನಿಯೋಜಿಸಬೇಕೆಂದು ಮನವಿ ಮಾಡಿಕೊಂಡರು | ಈಗಾಗಲೇ ಹುಣಸೂರು ಉಪವಿಭಾಗದಲ್ಲಿ ಖಾಲಿ ಇರುವ 41 ಸಂಖ್ಯೆ ಕಿರಿಯ ಲೈನ್‌ಮೆನ್‌ಗಳನ್ನು ನೇಮಕ ಮಾಡಿ ಹುಣಸೂರು ಉಪವಿಭಾಗಕ್ಕೆ ನೀಡಿದ್ದು, ಇವರು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸೂಚಿಸಿದರು. |
| | | | * ಗಾವಡಗೆರೆ ವ್ಯಾಪ್ತಿಯಲ್ಲಿನ ಕಟ್ಟೆಮಳಲವಾಡಿಯಲ್ಲಿ ವಿದ್ಯುತ್ ವಿತರಣ ಕೇಂದ್ರವನ್ನು ನಿರ್ಮಿಸಬೇಕು ಎಂದು ಮನವಿ ಮಾಡಿಕೊಂಡರು | ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ವಿಭಾಗ ರವರು ಮಾತನಾಡಿ ಈ ಭಾಗದಲ್ಲಿ 220 ಕೆವಿಎ ವಿ.ವಿ.ಕೇಂದ್ರವನ್ನು ಸ್ಥಾಪಿಸುವ ಪ್ರಕ್ರಿಯೆಯು ಚಾಲನೆಯಲ್ಲಿ ಇದೆ ಎಂದು ಉತ್ತರಿಸಿದರು. |
| | | | * ಸೋಲಾರ್ ಬಳಕೆಗೆ ಹೆಚ್ಚು ಆದ್ಯತೆ ನೀಡಬೇಕು. ಸದರಿ ಬಗ್ಗೆ ಆಂದೋಲನ ನಡೆಸಬೇಕು ಎಂದು ಮನವಿ ಮಾಡಿಕೊಂಡರು | ಮಾನ್ಯ ಅಧೀಕ್ಷಕರ ಇಂಜಿನಿಯರ್(ವಿ) ರವರು ಮಾತನಾಡಿ ಪ್ರಸ್ತುತ ನಿಗಮದಲ್ಲಿ ಚಾಲನೆಯಲ್ಲಿರುವ ಸೋಲಾರ್ ರೂಫ್ ಟಾಪ್ ಯೋಜನೆಯ ಬಗ್ಗೆ ಮಾಹಿತಿಯನ್ನು ನೀಡಿದರು |
| | | | * ಲೈನ್‌ಮೆನ್‌ಗಳು ಗ್ರಾಮೀಣ ಭಾಗದಲ್ಲಿ ವಾಸವಿರಲು ಆದೇಶಗೊಳಿಸಬೇಕು ಎಂದು ಮನವಿ ಮಾಡಿಕೊಂಡರು | ಈ ಬಗ್ಗೆ ಚರ್ಚಿಸಿ ಮುಂದೆ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು |
| 6. | ಖಾಲಿದ್ ಗುರುಪುರ 9986091347 | | * ನಿರಂತರ ಜ್ಯೋತಿ ಮಾರ್ಗವು ಸ್ವಲ್ಪ ಮಳೆಗಾಳಿಗೆ ಮಾರ್ಗವು ದುಸ್ಥಿತಿಗೆ ಬರಲು ಮಾರ್ಗಕ್ಕೆ ಹಾಕಿರುವ ಉಪಕರಣಗಳು ಕಳಪೆಯಾಗಿವೆ ಎಂದು ಆರೋಪಿಸಿದರು. | ಇದಕ್ಕೆ ಉತ್ತರಿಸಿದ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಯಾವುದೇ ಹೊಸ ವಿದ್ಯುತ್ ಮಾರ್ಗದ ಕಾಮಗಾರಿಗೆ ಬಳಸುವ ಇನ್ಸುಲೇಟರ್‌ಗಳು ಮೊದಲ ಮಳೆ ಗಾಳಿಗೆ ಸಹಜವಾಗಿ ಸ್ವಲ್ಪ ಪ್ರಮಾಣದಲ್ಲಿ |

| | | | |
|---|---|---|---|
| | | | ವಿಫಲಗೊಳ್ಳುವುದು ಸಹಜವಾಗಿದ್ದು, ಇದರಲ್ಲಿ ಕಾಮಗಾರಿಗೆ ಬಳಸಿರುವ ಸಾಮಾಗ್ರಿಗಳು ಗುಣಮಟ್ಟದಿಂದ ಕೂಡಿಲ್ಲ ಎಂದು ಆಪಾದಿಸುವುದು ಸರಿಯಲ್ಲ ಹಾಗೂ ಈ ಬಗ್ಗೆ ವಿದ್ಯುತ್ ಮಾರ್ಗವನ್ನು ಸುಸ್ಥಿತಿಯಲ್ಲಿ ನಿರ್ವಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು |
| | | * ನಾಗಪುರ ಹಾಡಿ 4ನೇ ಬ್ಲಾಕ್ ಕುರುಬರ ಹೊಸಹಳ್ಳಿ, ಹಳೆವಾರಂಬಿ ಗ್ರಾಮಕ್ಕೆ ಎನ್.ಜೆ.ವೈ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕು ಎಂದು ಮನವಿ ಮಾಡಿಕೊಂಡರು | ಈ ಬಗ್ಗೆ ಸ್ಥಳ ಪರಿಶೀಲಿಸಿ ಅಗತ್ಯ ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ಉಪವಿಭಾಗ ರವರಿಗೆ ಸೂಚಿಸಿದ ಹಾಗೂ ಈ ಕಾಮಗಾರಿಗಳನ್ನು ಶೀಘ್ರವಾಗಿ ಮಂಜೂರು ಮಾಡಿಕೊಡಲು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ವಿಭಾಗರವರಿಗೆ ಸೂಚಿಸಿದರು |
| | | * ಜನವಸತಿ ಪ್ರದೇಶಗಳಿಗೆ ಬೀದಿ ದೀಪದ ಲೈನನ್ನು ಹಾಕಿಕೊಡಬೇಕೆಂದು ಮನವಿ ಮಾಡಿಕೊಂಡರು | ಈ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯ್ತಿವತಿಯಿಂದ ಇದರ ಅಂದಾಜು ಮೊತ್ತವನ್ನು ನಿಗಮಕ್ಕೆ ಪಾವತಿಸಿದ್ದಲ್ಲಿ, ನಿಗಮದಿಂದ ಹೆಚ್ಚುವರಿಯಾಗಿ ಬೀದಿ ದೀಪಗಳಿಗ ಲೈನ್‌ನ್ನು ಹಾಕಿಕೊಡಲಾಗುವುದು ಎಂದು ತಿಳಿಸಿದರು. |
| | | * ಗ್ರಾಮಾಂತರ ಪ್ರದೇಶದಲ್ಲಿ ಸುಟ್ಟಿರುವ ಪರಿವರ್ತಕವನ್ನು ಬದಲಾಯಿಸಲು ವಿಳಂಬವಾಗುತ್ತಿರುವುದನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಂಡರು | ಈ ಬಗ್ಗೆ ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಂದ ಮಾಹಿತಿ ಪಡೆದು, ವಿಫಲಗೊಂಡಿರುವ ಪರಿವರ್ತಕಗಳನ್ನು ಸಕಾಲದಲ್ಲಿ ಬದಲಾವಣೆ ಮಾಡಲಾಗುತ್ತಿದೆ ಎಂದು ಮಾಹಿತಿಯನ್ನು ನೀಡಿದರು. |
| 7. | ಹೆಚ್.ಎಂ.ಬಸವೇಗೌಡ ಸಲಹಾ ಸಮಿತಿ ಸದಸ್ಯರು, ಹರಳಹಳ್ಳಿ | * ಹನಗೋಡು ವ್ಯಾಪ್ತಿಯ ಹೆಗ್ಗಂದೂರು ಹನಗೋಡು ರಸ್ತೆಯಲ್ಲಿನ ಮಾರ್ಗದ ಕಂಬಗಳು ವಾಲಿರುತ್ತವೆ ಇದನ್ನು ಸರಿಪಡಿಸಬೇಕೆಂದು ಮನವಿ ಮಾಡಿದರು. | ಈ ಬಗ್ಗೆ ಸ್ಥಳಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಂಡು ಕೂಡಲೇ ಸರಿಪಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು |

| | | | |
|---|---|---|---|
| | | ಮಾಡಿದರು.<br><br>* ಹನಗೋಡು ಶಾಖೆಗೆ ಶಾಶ್ವತ ಜೆ.ಇ ಯನ್ನು ನಿಯೋಜನೆಗೊಳಿಸಿಕೊಡಬೇಕೆಂದು ಮನವಿ ಮಾಡಿದರು | ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧೀಕಾರಿಗಳಿಗೆ ಸೂಚಿಸಿದರು<br><br>ಈ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸೂಚಿಸಿದರು |
| 8. | ವೆಂಕಟೇಶ್ ಚೌಡಿಕಟ್ಟೆ ಆಸ್ಪತ್ರೆಕಾವಲ್ ಪಂಚಾಯಿತಿ ಸದಸ್ಯರು 9980256298 | * ಚೌಡಿಕಟ್ಟೆ ಗ್ರಾಮದಲ್ಲಿ ಒಂದು ಕಂಬದ ಮೇಲೆ ಟಿ.ಸಿ ಯನ್ನು ಅಳವಡಿಸುವುದರಿಂದ ಟಿ.ಸಿ ಬದಲಾವಣೆ ಸಮಯದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆ ಇರುವುದರಿಂದ ಎರಡು ಕಂಬಗಳ ಮೇಲೆ ಪರಿವರ್ತಕವನ್ನು ಅಳವಡಿಸಲು ಮನವಿ ಮಾಡಿಕೊಂಡರು | ಈ ಬಗ್ಗೆ ಸ್ಥಳಪರಿಶೀಲಿಸಿ ಅಗತ್ಯ ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧೀಕಾರಿಗಳಿಗೆ ಸೂಚಿಸಿದರು |
| 9. | ಲಿಂಗರಾಜು ಕಿರಿಜಾಜಿ ಸಲಹಾ ಸಮಿತಿ ಸದಸ್ಯರು | * ಕಟ್ಟೆಮಳಲವಾಡಿ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಮನವಿ ಮಾಡಿದರು<br><br>* ರೈತರ ಐ.ಪಿ ಸೆಟ್‌ಗೆ ವಿದ್ಯುತ್‌ನ್ನು ಹೆಚ್ಚುವರಿ ಹಾಲಿ ನೀಡಬೇಕೆಂದು ಮನವಿ ಮಾಡಿದರು | ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ವಿಭಾಗ ರವರು ಮಾತನಾಡಿ ಈ ಭಾಗದಲ್ಲಿ 220 ಕೆವಿಎ ವಿ.ವಿ.ಕೇಂದ್ರವನ್ನು ಸ್ಥಾಪಿಸುವ ಪ್ರಕ್ರಿಯೆಯು ಚಾಲನೆಯಲ್ಲಿ ಇದೆ ಎಂದು ಉತ್ತರಿಸಿದರು.<br><br>ಪ್ರಸ್ತುತ ಸರ್ಕಾರದ ಆದೇಶದನ್ವಯ ಐ.ಪಿ ವಿದ್ಯುತ್ ಮಾರ್ಗಗಳಿಗೆ ಹಗಲು ವೇಳೆಯಲ್ಲಿ ನಾಲ್ಕು ಗಂಟೆ ಹಾಗೂ ರಾತ್ರಿ ವೇಳೆಯಲ್ಲಿ ಮೂರು ಗಂಟೆ ವಿದ್ಯುತ್ ಸರಬರಾಜನ್ನು ನೀಡಲಾಗುತ್ತಿದೆ ಎಂದು ವಿವರಿಸಿದರು |
| 10. | ರಾಜು ಗೋವಿಂದನಹಳ್ಳಿ ಪಂಚಾಯ್ತಿ, 9945166531 | * ಪರಿವರ್ತಕದ ಮೇಲೆ ತೆಂಗಿನ ಮರವಿರುವುದರಿಂದ ತೆಂಗಿನ ಗರಿಗಳು ಬಿದ್ದು ವಿದ್ಯುತ್ ಅಡಚಣೆಯಾಗುತ್ತಿದ್ದು, ಇದನ್ನು ಸರಿಪಡಿಸಬೇಕು ಎಂದು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ಕ್ರಮವನ್ನು ಕೈಗೊಳ್ಳಲು ಶಾಖಾಧೀಕಾರಿಗಳಿಗೆ ಸೂಚಿಸಿದರು |
| 11. | ರಾಜೇಂದ್ರ ಸಲಹಾ ಸಮಿತಿ ಸದಸ್ಯರು 9731134818 | * ತಾಲ್ಲೂಕು ಗಡಿ ಭಾಗದಲ್ಲಿರುವ ಒಂದು ಹಳ್ಳಿಗೆ ಎನ್.ಜೆ.ವೈ ವಿದ್ಯುತ್ ಸಂಪರ್ಕವಿದ್ದು, ಪಕ್ಕದ ಚಿಕ್ಕ ಪಡುವಕೋಟೆ ಗ್ರಾಮಕ್ಕೆ ಎನ್.ಜೆ.ವೈ ವಿದ್ಯುತ್ ಸಂಪರ್ಕವಿಲ್ಲ. ಸದರಿ ಗ್ರಾಮಕ್ಕೆ ಎನ್.ಜೆ.ವೈ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಮನವಿ ಮಾಡಿದರು | ಈ ಬಗ್ಗೆ ಕ್ರಮವನ್ನು ಕೈಗೊಂಡು ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ನೀಡಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು |

| | | | |
|---|---|---|---|
| | | * ಆಸ್ಪತ್ರೆಕಾವಲ್ ಪಂಚಾಯಿತಿ ವ್ಯಾಪ್ತಿಗೆ ಸುಮಾರು ೫೦ ಇಂಟರ್‌ಮೀಡಿಯಟ್ ಪೋಲ್ಸ್ ಮತ್ತು ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಬೇಕು ಎಂದು ಮನವಿ ಮಾಡಿದರು | ಈ ಬಗ್ಗೆ ಸ್ಥಳಪರಿಶೀಲಿಸಿ ಅಗತ್ಯ ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು |
| ೧೨. | ಸುಮತಿ<br>ಹನಗೋಡು ಸಲಹಾ ಸಮಿತಿ ಸದಸ್ಯರು<br>9900911684 | * ನೇರಳಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ (ಬಿಲ್ಲೆನಹೊಸಹಳ್ಳಿ) - ಶೆಟ್ಟಹಳ್ಳಿ ಗ್ರಾಮದ ಕುಡಿಯುವ ನೀರು ಸ್ಥಾವರಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಮನವಿ ಮಾಡಿದರು | ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ಉಪವಿಭಾಗ ರವರು ಮಾತನಾಡಿ ಸದರಿ ಗ್ರಾಮಗಳ ಕುಡಿಯುವ ನೀರು ಸರಬರಾಜು ಸ್ಥಾವರಗಳನ್ನು ಸಂಬಂಧಿಸಿದ ನೇರಳಕುಪ್ಪೆ ಗ್ರಾಮ ಪಂಚಾಯ್ತಿ ವತಿಯಿಂದ ಸ್ವಯಂ ಕಾರ್ಯಗತ ಯೋಜನೆಯಡಿಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸಿಕೊಳ್ಳುತ್ತಿದ್ದು, ಈ ಕಾಮಗಾರಿಯು ಚಾಲನೆಯಲ್ಲಿ ಇರುತ್ತದೆ ಎಂದು ಉತ್ತರಿಸಿದರು |
| | | * ಬಿಲ್ಲೇನಹೊಸಹಳ್ಳಿ ಮತ್ತು ನೇಗತ್ತೂರು, ಚಿಕ್ಕೇಗೌಡನಕೊಪ್ಪಲು ಗ್ರಾಮಗಳಿಗೆ ಎನ್.ಜೆ.ವೈ ವಿದ್ಯುತ್ ಸಂಪರ್ಕ ನೀಡಬೇಕೆಂದು ಮನವಿ ಮಾಡಿಕೊಂಡರು<br>* ಶಿಂಡೇನಹಳ್ಳಿ ಗ್ರಾಮದ ಸ್ಕೂಲ್ ಹತ್ತಿರದಿರುವ ಎಲ್.ಟಿ. ಮಾರ್ಗವನ್ನು ಸ್ಥಳಾಂತರಿಸಬೇಕೆಂದು ಮನವಿ ಮಾಡಿಕೊಂಡರು<br>* ಅಬ್ಬೂರು ಗ್ರಾಮದಲ್ಲಿ ಬೀದಿ ದೀಪದ ವಿದ್ಯುತ್ ಲೈನ್ ಎಳೆಯಬೇಕೆಂದು ಮನವಿ ಮಾಡಿಕೊಂಡರು<br>* ಎಸ್.ಸಿ/ಎಸ್.ಟಿ ಜನಾಂಗದವರಿಗೆ ಭಾಗ್ಯ ಜ್ಯೋತಿ (RGGVY) ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಮನವಿ ಮಾಡಿಕೊಂಡರು | ಇದರ ಬಗ್ಗೆ ಸ್ಥಳ ಪರಿಶೀಲಿಸಿ ಅಗತ್ಯ ಅಂದಾಜು ಪಟ್ಟಿಯನ್ನು ತಯಾರಿಸಿ ಕ್ರಮವನ್ನು ಕೈಗೊಳ್ಳಲು ಹಾಗೂ ಶಾಲೆಗಳ ಮೇಲೆ ಹಾದು ಹೋಗಿರುವ ವಿದ್ಯುತ್ ಮಾರ್ಗಗಳನ್ನು ತ್ವರಿತಗತಿಯಲ್ಲಿ ಬದಲಾಯಿಸಲು ಕ್ರಮವನ್ನು ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧಿಕಾರಿಗಳಿಗೆ ಸೂಚಿಸಿದರು |
| | | * ಹನಗೋಡು ಶಾಖೆಗೆ ಶಾಶ್ವತ ಜೆ.ಇ ಯನ್ನು ನಿಯೋಜನೆ ಮಾಡಿಕೊಡಬೇಕೆಂದು ಮನವಿ ಮಾಡಿಕೊಂಡರು | ಈ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸೂಚಿಸಿದರು |
| ೧೩. | ಶಾಂತಮ್ಮ<br>ಸಲಹಾ ಸಮಿತಿ ಸದಸ್ಯರು,<br>ಹುಣಸೂರು | * ರಾತ್ರಿ ವೇಳೆ ಬೀದಿ ದೀಪಗಳನ್ನು ಬೇಗ ಆನ್ ಮಾಡುತ್ತಾರೆ ಇದನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಂಡರು | ಬೀದಿ ದೀಪದ ನಿರ್ವಹಣೆ ಕಾರ್ಯವು ಸಂಬಂಧಿಸಿದ ನಗರ ಸಭೆ/ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ ಈ ಬಗ್ಗೆ ಸಂಬಂಧಿಸಿದ ನಗರಸಭೆ /ಗ್ರಾಮ ಪಂಚಾಯ್ತಿಗಳ ಗಮನಕ್ಕೆ ತಂದು ಬೀದಿ ದೀಪಗಳನ್ನು ಸರಿಯಾದ |

| | | | | |
|---|---|---|---|---|
| | | | | ಸೂಚಿಸಿದರು |
| 14. | ಚಂದ್ರಶೇಖರ್ ಬೀಜಗನಹಳ್ಳಿ | | * ಮೂಕನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಸುಮಾರು 10 ಕಂಬಗಳು ಶಿಥಿಲಗೊಂಡಿದ್ದು, ಇವುಗಳನ್ನು ಬದಲಾಯಿಸಿಕೊಡಬೇಕೆಂದು ಮನವಿ ಮಾಡಿದರು<br>* ಸುಮಾರು 8 ವರ್ಷಗಳ ಹಿಂದೆ ವೈರ್ ಕಳ್ಳತನವಾಗಿದ್ದು, ಇಲ್ಲಿಯವರೆಗೂ ಸದರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ. ಸದರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮನವಿ ಮಾಡಿದರು | ಈ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಂಡು ಸರಿಪಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು |
| 15. | ದೊಡ್ಡಹನುಮೇಗೌಡ್ರು | | * ವಿದ್ಯುತ್ ಮಾರ್ಗಗಳಲ್ಲಿ ಮರಗಳು ತಾಗುತ್ತಿದ್ದು ಸದರಿ ಮರಗಳನ್ನು ತೆಗೆಸಬೇಕು ಎಂದು ಮನವಿ ಮಾಡಿಕೊಂಡರು | ಈಗಾಗಲೇ ಮಳೆಗಾಲದ ಅವಧಿಯಲ್ಲಿ ಲೈನ್ ನಿರ್ವಹಣೆಗೆ ಸಾಕಷ್ಟು ಸಿಬ್ಬಂದಿಗಳನ್ನು ನೀಡಿದ್ದು, ಇವರನ್ನು ಉಪಯೋಗಿಸಿಕೊಂಡು ವಿದ್ಯುತ್ ಮಾರ್ಗಕ್ಕೆ ತಗಲುತ್ತಿರುವ ಮರದ ಕೊಂಬೆಗಳನ್ನು ತೆರವುಗೊಳಿಸಿ ವಿದ್ಯುತ್ ಮಾರ್ಗಗಳನ್ನು ಸುಸ್ಥಿತಿಯಲ್ಲಿ ಕಟ್ಟುನಿಟ್ಟಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 16. | ಸತ್ಯಪ್ಪ ಹುಣಸೂರು 8861082609 | | * ನಗರ ವ್ಯಾಪ್ತಿಯಲ್ಲಿ ಹಳೆಯ ವೈರ್ ಮತ್ತು ಕಂಬಗಳನ್ನು ಬದಲಾಯಿಸಬೇಕೆಂದು ಮನವಿ ಮನವಿ ಮಾಡಿಕೊಂಡರು<br>* ಕುಡಿಯುವ ನೀರಿನ ಸಮಸ್ಯೆ ಇದ್ದು ವಿಫಲವಾದ ಪರಿವರ್ತಕಗಳನ್ನು ವಿಳಂಬ ಮಾಡದಂತೆ ಬದಲಾಯಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು<br>* ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ರೈತರಿಗೆ ಪರಿವರ್ತಕವನ್ನು ನೀಡುವಲ್ಲಿ ವಿಳಂಬವಾಗುತ್ತದೆ ಎಂದು ಆರೋಪಿಸಿದರು<br>* ಮನೆಯ ಬಿಲ್ಲುಗಳು 500 ರೂ.ಬರುವಲ್ಲಿ ರೂ.5000 ಬಿಲ್ಲುಗಳನ್ನು ನೀಡಿದ್ದಾರೆ ಎಂದು ಆರೋಪಿಸಿದರು | ನಗರ ವ್ಯಾಪ್ತಿಯಲ್ಲಿ ಹಾಗೂ ಗ್ರಾಮೀಣ ವ್ಯಾಪ್ತಿಯಲ್ಲಿ ಈಗಾಗಲೇ ವಿದ್ಯುತ್ ವ್ಯವಸ್ಥೆ ಸುಧಾರಣೆಗೆ ಐ.ಪಿ.ಡಿ.ಎಸ್ ಹಾಗೂ ಡಿ.ಡಿ.ಯು.ಜಿ.ಜೆ.ವೈ ಎಂಬ ಪ್ರತ್ಯೇಕ ಕಾಮಗಾರಿಗಳು ಮಂಜೂರಾಗಿದ್ದು, ಈ ಕಾಮಗಾರಿಗಳಲ್ಲಿ ಸದರಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಹಾಗೂ ವಿಫಲಗೊಂಡ ಪರಿವರ್ತಕಗಳನ್ನು ಸಕಾಲದಲ್ಲಿ ಬದಲಾಯಿಸಲು ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ ಎಂದು ಸೂಚಿಸಿದರು ಹಾಗೂ ಹೆಚ್ಚಾಗಿ ಬಂದಿರುವ ವಿದ್ಯುತ್ ಬಿಲ್ ಬಗ್ಗೆ ಮಾಪಕವನ್ನು ಪರೀಕ್ಷಿಸಿ ಗ್ರಾಹಕರಿಗೆ ಮನವರಿಕೆ ಮಾಡಲು ಹಾಗೂ ಕ್ರಮವನ್ನು ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿದರು |

| | | | |
|---|---|---|---|
| 17. | ಸುರೇಶ<br>ಹುಂಡಿಮಾಳ<br>9945497727 | * ರತ್ನಪುರಿ ಶಾಖೆಯ ಜೆ.ಇ ಗೆ ಎರಡು ಶಾಖೆಯಲ್ಲಿ ಪ್ರಭಾರ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ರತ್ನಪುರಿ ವ್ಯಾಪ್ತಿಯ ಕೆಲಸಗಳು ಕುಂಠಿತವಾಗಿರುತ್ತವೆ. ಆದ್ದರಿಂದ ಪ್ರಭಾರ ಕರ್ತವ್ಯವನ್ನು ತೆರವುಗೊಳಿಸಬೇಕೆಂದು ಮನವಿ ಮಾಡಿದರು<br>* ಉಯಿಗೌಡನಹಳ್ಳಿ ದಾಸನಪುರ, ಕುಡಿಯುವ ನೀರು ಮುದ್ದನಹಳ್ಳಿ, ಹುಂಡಿಮಾಳ, ಶಿವಪುರ ಗ್ರಾಮಗಳಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಬೇಕೆಂದು ಮನವಿ ಮಾಡಿಕೊಂಡರು | ಪ್ರಸ್ತುತ ಹುಣಸೂರು ಉಪವಿಭಾಗದಲ್ಲಿ ಖಾಲಿ ಇರುವ 2 ಸಂಖ್ಯೆ ಶಾಖಾಧಿಕಾರಿಗಳ ಬಗ್ಗೆ ಮಾಹಿತಿಯನ್ನು ಪಡೆದು ಈ ಎರಡು ಶಾಖೆಗಳಿಗೆ ಅಂದರೆ ಬಿಳ್ಕುಂದ ಹಾಗೂ ಹನಗೋಡು ಶಾಖೆಗಳಿಗೆ ಪ್ರತ್ಯೇಕವಾಗಿ ಶಾಖಾಧಿಕಾರಿಗಳನ್ನು ನಿಯೋಜಿಸಲು ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸೂಚಿಸಿದರು ಹಾಗೂ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಶಾಖಾಧೀಕಾರಿಗಳಿಗೆ ಸೂಚಿಸಿದರು |
| 18. | ಸ್ವಾಮಿಬೋವಿ<br>ಎನ್.ಎಸ್.ಬಡಾವಣೆ<br>9535663165 | * 20 ವರ್ಷಗಳಿಂದ ಎನ್.ಎಸ್.ಬಡಾವಣೆಯಲ್ಲಿ 10 ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಮನವಿ ಮಾಡಿಕೊಂಡರು | ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಂದ ಮಾಹಿತಿಯನ್ನು ಪಡೆದು, ಸದರಿ ಭಾಗದಲ್ಲಿ ವಿದ್ಯುತ್ ಸಂಪರ್ಕ ಇಲ್ಲದಿರುವ ಹತ್ತು ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೋರಿ ಪ್ರತ್ಯೇಕವಾಗಿ ಅರ್ಜಿಗಳನ್ನು, ಸಂಬಂಧಿಸಿದ ನಗರ ಸಭೆ, ಹುಣಸೂರು ನಿಂದ ಪಡೆದ ನಿರಕ್ಷೇಪಣಾ ಪತ್ರದೊಂದಿಗೆ ನೊಂದಣಿ ಮಾಡಿ ವಿದ್ಯುತ್ ಸಂಪರ್ಕವನ್ನು ಪಡೆಯುವಂತೆ ಸೂಚಿಸಿದರು |
| 19. | ರಾಮೇಗೌಡ್ರು<br>ಹಳೆಪುರ<br>8970432329 | * ಚಿನ್ನಸೋಗೆ ಗೇಟ್‌ನಲ್ಲಿ ಐ.ಪಿ ಸೆಟ್‌ಗೆ ಹೆಚ್ಚುವರಿ ಟಿಸಿ ಯನ್ನು ಅಳವಡಿಸಲು ಮನವಿ ಮಾಡಿಕೊಂಡರು | ಹೆಚ್ಚುವರಿಯಾಗಿ ವಿದ್ಯುತ್ ಭಾರ ಹೊಂದಿ, ಸಕ್ರಮೀಕರಣಗೊಂಡಿರುವ ಐ.ಪಿ.ಸೆಟ್‌ಗಳ ಪರಿವರ್ತಕಗಳಿಗೆ ಈಗಾಗಲೇ ಯು.ಎನ್.ಐಪಿ ಯೋಜನೆಯಲ್ಲಿ ಪರಿವರ್ತಕಗಳನ್ನು ಅಳವಡಿಸಲು ಕ್ರಮವನ್ನು ಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಿದರು |
| 20. | ಪದ್ಮನಾಭ<br>ಬಿಳ್ಕುಂದ<br>9611079100 | * ಬಿಳ್ಕುಂದ ಶಾಖೆಗೆ ಶಾಶ್ವತ ಜೆ.ಇ ಯನ್ನು ನಿಯೋಜನೆಗೊಳಿಸಲು ಮನವಿ ಮಾಡಿಕೊಂಡರು | ಬಿಳ್ಕುಂದ ಶಾಖೆಯಲ್ಲಿ ಖಾಲಿ ಇರುವ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ, ಕಿರಿಯ ಇಂಜಿನಿಯರ್(ವಿ) ರವರನ್ನು ನಿಯೋಜಿಸಲು ಕ್ರಮವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು |

| | | | |
|---|---|---|---|
| 21. | ಶಿವಣ್ಣ<br>ಅತ್ತಿಗುಪ್ಪೆ<br>7337762873 | * ರಸ್ತೆ ಮಧ್ಯೆ ಇರುವ ಕಂಬಗಳನ್ನು ಸ್ಥಳಾಂತರಗೊಳಿಸಬೇಕು ಎಂದು ಮನವಿ ಮಾಡಿಕೊಂಡರು | ಇದರ ಬಗ್ಗೆ ಸಂಬಂಧಿಸಿದ ನಗರ ಸಭೆ /ಗ್ರಾಮಪಂಚಾಯ್ತಿ ವತಿಯಿಂದ ಅಂದಾಜು ಮೊತ್ತವನ್ನು ನಿಗಮಕ್ಕೆ ಪಾವತಿಸಲು ಸಿದ್ಧರಿದ್ದಲ್ಲಿ ಹಾಗೂ ಪಾವಿತಿಸಿದ್ದಲ್ಲಿ ನಿಗಮದ ನಿಯಮಾನುಸಾರ ಕ್ರಮವನ್ನು ಕೈಗೊಂಡು ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು |
| 22. | ಪರಮೇಶ<br>ಸಿದ್ದಲಿಂಗಪುರ | * ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಿಕೊಡಬೇಕೆಂದು ಮನವಿ ಮಾಡಿಕೊಂಡರು | ವಿಫಲಗೊಂಡಿರುವ ಪರಿವರ್ತಕಗಳನ್ನು ಸಕಾಲದಲ್ಲಿ ಬದಲಾವಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು |

ಸಭೆಯ ಕೊನೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ). ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪ್ರತಿಗಳು:-

1. ಮಾನ್ಯ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ),ಚಾವಿಸನಿನಿ ನಿಗಮ ಕಛೇರಿ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),ಚಾವಿಸನಿನಿ ನಿಗಮ ಕಛೇರಿ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ
3. ಮಾನ್ಯ ಮುಖ್ಯಇಂಜಿನಿಯರ್ (ವಿ), ಚಾವಿಸನಿನಿ, ವಲಯಕಛೇರಿ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧೀಕ್ಷಕಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನೋಡಲ್ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.ಕಛೇರಿ ಪ್ರತಿ.